/378399/2023

**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru- 03
Telephone: 080 23367123
Email:apccfpr@gmail.com

ಹಳೆ ಕಡತ ಸಂಖ್ಯೆ: ಬಿ4/ಸಿಬ್ಬಂದಿ/ಸಿಆರ್-61/2021-22 **E - 867523**
E-office No: KFD/HOFF/B4(EST)/ 28/2022-PnR-KFD Date: 31-01-2023

**ಕಛೇರಿ ಆದೇಶ ಸಂಖ್ಯೆ:203/2022-23**

## ಕಛೇರಿ ಆದೇಶ

**ವಿಷಯ:** ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (HK) ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ [ಕರ್ನಾಟಕ ಸೇವಾ ನಿಯಮಾವಳಿಯ ನಿಯಮ 42(ಬಿ) ಅನ್ವಯಿಸುವಂತೆ] ಸ್ಥಾನಪನ್ನ ಮುಂಬಡ್ತಿ ನೀಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್ ಇ ಇ-54/ಎಫ್ ಟಿ ಸಿ-90 ದಿನಾಂಕ: 04.08.2003 [ಕರ್ನಾಟಕ ಅರಣ್ಯ ಇಲಾಖೆ (ಸೇವೆಗಳು) (ತಿದ್ದುಪಡಿ) ನಿಯಮಗಳು 2003ರ ಶೆಡ್ಯೂಲ್ -II] R/W ಅಧಿಸೂಚನೆ ಸಂಖ್ಯೆ: FEE 203 FEG 2015, ದಿನಾಂಕ:06-08-2019 (ತಿದ್ದುಪಡಿ).
2. ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ4/ಸಿಬ್ಬಂದಿ/ಸಿಆರ್-94/2020-21 ದಿನಾಂಕ:28.06.2021 *(ದ್ವಿತೀಯ ದರ್ಜೆ ಸಹಾಯಕ ವೃಂದದ [HK] ಅಂತಿಮ ಜ್ಯೇಷ್ಠತ ಪಟ್ಟಿ ಪ್ರಕಟನೆ).*
3. ಇಲಾಖಾ ಮುಂಬಡ್ತಿ ಸಮಿತಿ ಸಭೆ ದಿನಾಂಕ: 06.07.2022.
4. ಮಾನ್ಯ ಸಚಿವರು, ಅರಣ್ಯ ಮತ್ತು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿ ಇವರ ಟಿಪ್ಪಣಿ ಸಂಖ್ಯೆ: ಅಆನಾಸ&ಗ್ರಾವಸ/ಅಕಾ/493/2022 ದಿನಾಂಕ:11.07.2022.
5. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಆಸುಇ 106 ಸೇನನಿ 2021, ದಿನಾಂಕ:10.12.2021.

**ಪ್ರಸ್ತಾವನೆ:**

ಉಲ್ಲೇಖ(1)ರ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಬಡ್ತಿ ಮತ್ತು ನೇರ ನೇಮಕಾತಿ(50:50)ಯಿಂದ ಭರ್ತಿ ಮಾಡಬೇಕಾಗಿರುತ್ತದೆ. ಅದರಂತೆ, ಉಲ್ಲೇಖ(2)ರಲ್ಲಿ ಅಂತಿಮವಾಗಿ ಪ್ರಕಟಿಸಿದ ದ್ವಿತೀಯ ದರ್ಜೆ ಸಹಾಯಕ ವೃಂದದ [HK] ಅಂತಿಮ ಜ್ಯೇಷ್ಠತ ಪಟ್ಟಿ ಯಲ್ಲಿನ ಅರ್ಹರಾದ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಲು ಉಲ್ಲೇಖ(3)ರಂತೆ ದಿನಾಂಕ: 06.07.2022ರಂದು ಇಲಾಖಾ ಮುಂಬಡ್ತಿ ಸಭೆಯನ್ನು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇಲೆ ರೋಸ್ಟರ್ ನಿಯಮಗಳನ್ವಯ ನೌಕರರ ಸೇವಾ ವಿವರ, ಕಾರ್ಯನಿರ್ವಹಣಾ ವರದಿಗಳು ಹಾಗೂ ಇಲಾಖಾ ವಿಚಾರಣೆ/ಲೋಕಾಯುಕ್ತ ಪ್ರಕರಣಗಳು /ಅಪರಾಧಿಕ ಪ್ರಕರಣಗಳ ವಿಷಯಗಳನ್ನು ಪರಿಶೀಲಿಸಿ, ಅರ್ಹರಿರುವ ದ್ವಿತೀಯ ದರ್ಜೆ ಸಹಾಯಕರನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಲಾಗಿರುತ್ತದೆ.

ಈ ಮಧ್ಯೆ ಮಾನ್ಯ ಅರಣ್ಯ ಮತ್ತು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿಯವರ ಉಲ್ಲೇಖ (4)ರ ಟಿಪ್ಪಣಿಯಲ್ಲಿ ಅವಧಿಪೂರ್ವ ವರ್ಗಾವಣೆ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಇದು ಸಂಪೂರ್ಣ ಆಗುವವರೆಗೆ ಲಿಪಿಕ ವೃಂದದ ಹುದ್ದೆಗಳ ಮುಂಬಡ್ತಿ ಪ್ರಕ್ರಿಯೆಯನ್ನು ಜಾರಿಗೊಳಿಸದಂತೆ ಹಾಗೂ ಮುಂಬಡ್ತಿಗೆ ಸಂಬಂಧಿಸಿದಂತೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ತದನಂತರ ಈಗಾಗಲೇ ವರ್ಗಾವಣೆ ಪ್ರಕ್ರಿಯೆಗಳು ಮುಕ್ತಾಯವಾಗಿರುವುದರಿಂದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರೊಂದಿಗೆ ದಿನಾಂಕ:18.10.2022ರಂದು ಚರ್ಚಿಸಿ ಈ ಮುಂಬಡ್ತಿ ಪ್ರಕ್ರಿಯೆಯನ್ನು ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ.

ಉಲ್ಲೇಖ(5)ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರದಲ್ಲಿ ರಾಜ್ಯ ನಾಗರೀಕ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸಿ ಮುಂಬಡ್ತಿ ನೀಡುವಂತೆ ಸೂಚಿಸಲಾಗಿರುತ್ತದೆ ಹಾಗೂ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿಮಾಡಲು ನಿರ್ದೇಶಿಸಲಾಗಿರುತ್ತದೆ.

ಮುಂದುವರೆದು, ಸಂಬಂಧಿಸಿದ ನಿಯಂತ್ರಣ ಕಛೇರಿಗಳಿಂದ ಸ್ವೀಕರಿಸಿದ ಮಾಹಿತಿ/ದಾಖಲೆಗಳ ಆಧಾರದ ಮೇಲೆ ಮುಂಬಡ್ತಿ ನೀಡುವ ಸಲುವಾಗಿ ಬಡ್ತಿಗೆ ನಿಗದಿಪಡಿಸಿದ ಸೇವಾ ವಿವರ, ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು ಹಾಗೂ ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ *[ಕರ್ನಾಟಕ ನಾಗರೀಕ ಸೇವೆಗಳು (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರ ನಿಯಮ 3(1)ರ ನಿರ್ಬಂದನೆಯನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಒಳಗೊಂಡಂತೆ]* ಉತ್ತೀರ್ಣರಾದ ಬಗ್ಗೆ, ಹಾಗೂ ಇಲಾಖಾ ವಿಚಾರಣೆ/ಲೋಕಾಯುಕ್ತ ವಿಚಾರಣೆ/ ಕ್ರಿಮಿನಲ್ ಪ್ರಕರಣಗಳ ಕುರಿತು ಪರಿಶೀಲಿಸಿ, ಅರ್ಹರಿರುವ ನೌಕರರಿಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (HK) ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಕರ್ನಾಟಕ ನಾಗರಿಕ ಸೇವೆಗಳು ನಿಯಮಾವಳಿಯ ನಿಯಮ 42ಬಿ ರಡಿ ಸ್ಥಾನಪನ್ನ ಬಡ್ತಿ ನೀಡಲು ಉಲ್ಲೇಖ (3)ರ ದಿನಾಂಕ: 06-07-2022ರ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ತೀರ್ಮಾನಿಸಿರುವುದರಿಂದ, ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸೇವಾ ನಿಯಮಾವಳಿಯ ನಿಯಮ 42(ಬಿ) ಅನ್ವಯಿಸುವಂತೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (HK) ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಸ್ಥಾನಪನ್ನ ಬಡ್ತಿ ನೀಡಿ ವೇತನ ಶ್ರೇಣಿ ರೂ. 27650-650-29600-750-32600-850-36000-950-39800-1100-46400-1250-52650 ಯನ್ನು ನಿಗದಿಪಡಿಸಿ, ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಕಛೇರಿಗಳಲ್ಲಿನ ಖಾಲಿ ಹುದ್ದೆಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ನೇಮಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

| ಕ್ರ. ಸಂ | ನೌಕರರ ಹೆಸರು/ ಶ್ರೀಮತಿ / ಶ್ರೀ | ಜ್ಯೇಷ್ಠತ ಕ್ರಮ ಸಂಖ್ಯೆ | ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಕಛೇರಿ | ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಿ ನೇಮಿಸಲಾದ ಕಛೇರಿ |
|---|---|---|---|---|
| 1 | ನಾಗರಾಜ ಎನ್ ಗಟ್ಟು | 39 (ಪ.ಜಾ) | ವಲಯ ಅರಣ್ಯಾಧಿಕಾರಿಗಳ ಕಛೇರಿ, ಹೊಸಪೇಟೆ ವಲಯ, ಹೊಸಪೇಟೆ. | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ ವೃತ್ತ, ಬಳ್ಳಾರಿ. ***[ಖಾಲಿ ಹುದ್ದೆ]*** |

ಈ ಮೇಲಿನ ಆದೇಶವು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಸಂಬಂಧಿಸಿದ ನೌಕರರ ಶೈಕ್ಷಣಿಕ ವಿದ್ಯಾರ್ಹತೆ, ನಿಗದಿತ ಇಲಾಖಾ ಪರೀಕ್ಷೆ ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ, ಪರೀಕ್ಷಾರ್ಥ ಅವಧಿ, ವಾರ್ಷಿಕ ಕಾರ್ಯನಿರ್ವಹಣಾ ವರದಿ ಮತ್ತು ಇಲಾಖಾ ವಿಚಾರಣೆ/ಲೋಕಾಯುಕ್ತ ಪ್ರಕರಣಗಳು/ ಅಪರಾಧಿಕ ಪ್ರಕರಣಗಳ ಕುರಿತಂತೆ ಆಯಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸಿರುವ ದಾಖಲೆಗಳ ಆಧಾರದ ಮೇರೆಗೆ ಸದರಿ ಮುಂಬಡ್ತಿ ಆದೇಶವನ್ನು ಹೊರಡಿಸಲಾಗಿದೆ. ಒಂದು ವೇಳೆ ಯಾವುದೇ ಹಂತದಲ್ಲಿ ಯಾವುದೇ ನೌಕರರ ವಿರುದ್ಧ ವ್ಯತಿರಿಕ್ತ ಷರಾ ಕಂಡುಬಂದಲ್ಲಿ/ ಶಿಸ್ತು ಕ್ರಮಕ್ಕೆ ಒಳಪಟ್ಟಿದ್ದಲ್ಲಿ ಕೂಡಲೇ ಅಂತಹ ನೌಕರರ ಮುಂಬಡ್ತಿ ಆದೇಶವನ್ನು ರದ್ದುಪಡಿಸಲಾಗುವುದು.
2. ಈ ಆದೇಶವು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ/ನ್ಯಾಯಾಲಯದ ಆದೇಶದ ಷರತ್ತಿಗೆ ಒಳಪಟ್ಟಿರುತ್ತದೆ.

3. ಉಲ್ಲೇಖ(5)ರ ಸರ್ಕಾರದ ಅಧಿಕೃತ ಜ್ಞಾಪನ ಪತ್ರದಲ್ಲಿನ ಮಾರ್ಗಸೂಚಿಗಳನ್ವಯ, ಒಂದು ವೇಳೆ ಈಗ ನೀಡಿರುವ ಮುಂಬಡ್ತಿ ಹುದ್ದೆಯು ನೇರ ನೇಮಕಾತಿಗೆ ವರ್ಗೀಕರಿಸಿದ ಹುದ್ದೆಯಾಗಿ ಕಂಡುಬಂದಲ್ಲಿ, ಈ ನೌಕರರು ಈ ಆದೇಶದ ಆಧಾರದ ಮೇಲೆ ಜ್ಯೇಷ್ಠತೆಯನ್ನು ನೀಡುವಂತೆ ಹಾಗೂ ಪೂರ್ವಾನ್ವಯ ಮುಂಬಡ್ತಿ ನೀಡಬೇಕೆಂದು ಹಕ್ಕೊತ್ತಾಯ ಮಾಡುವಂತಿಲ್ಲ.
4. ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 4-ಎ ರನ್ವಯ ಈ ಮೇಲಿನ ನೌಕರರುಗಳು ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಸ್ಥಾನವನ್ನು ಬಡ್ತಿಯನ್ನು ತ್ಯಜಿಸಲು (Foregoing Promotion) ಇಚ್ಛಿಸಿದ್ದಲ್ಲಿ ಅವರು ಈ ಆದೇಶವು ಇಲಾಖಾ ವೆಬ್ ಸೈಟ್ ನಲ್ಲಿ/ ತಲುಪಿದ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ಸಮರ್ಪಕವಾದ ಕಾರಣಗಳೊಂದಿಗೆ ಲಿಖಿತ ರೂಪದಲ್ಲಿ ಮನವಿಯನ್ನು ಈ ಕಛೇರಿಗೆ ತಪ್ಪದೇ ಸಲ್ಲಿಸುವುದು. ಈ ನಿಗದಿತ ಅವಧಿಯಲ್ಲಿ ನೌಕರರು ಅಂತಹ ಲಿಖಿತ ಮನವಿಯನ್ನು ಈ ಕಛೇರಿಗೆ ಸಲ್ಲಿಸದೇ ಇದ್ದಲ್ಲಿ ಹಾಗೂ ಈ ಆದೇಶದಲ್ಲಿ ನಿಗದಿಪಡಿಸಿದ ಹುದ್ದೆಯಲ್ಲಿ ಕಾರ್ಯ ವರದಿ ಮಾಡದೇ ಇದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

31.1.23

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿ ಮಾಹಿತಿಗಾಗಿ / ಹಾಗೂ ಮುಂದಿನ ಕ್ರಮಕ್ಕಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ/ ಅಭಿವೃದ್ಧಿ/ ಅರಣ್ಯ ಸಂರಕ್ಷಣೆ/ EWPRT&CC/ ಕಾರ್ಯಯೋಜನೆ), ಅರಣ್ಯ ಭವನ, ಬೆಂಗಳೂರು.
3. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು - ಈ ಆದೇಶವನ್ನು ಅರಣ್ಯ ಇಲಾಖೆ ವೆಬ್‌ಸೈಟ್‌ನಲ್ಲಿ ಕೂಡಲೇ ಅಳವಡಿಸಲು.
5. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ / ಕಲಬುರಗಿ ವೃತ್ತಗಳು.
6. ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ.
7. ಈ ಕಛೇರಿಯ ಆಡಳಿತಾಧಿಕಾರಿ/ಆಡಳಿತ ಸಹಾಯಕರು.
8. ಸಂಬಂಧಿಸಿದ ಸಿಬ್ಬಂದಿಗೆ- ಇಲಾಖಾ ವೆಬ್ ಸೈಟ್ ಪ್ರಕಟಣೆ ಮೂಲಕ/ಸಂಬಂಧಿಸಿದ ನಿಯಂತ್ರಣಾಧಿಕಾರಿಗಳ ಮೂಲಕ.
9. ಕಛೇರಿ ಆದೇಶದ /ಶಾಖಾ ಕಡತಕ್ಕೆ
10. ಹೆಚ್ಚುವರಿ ಪ್ರತಿ.